ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-5 Issue 2, September-October, 2023, Pp. 14-21.
©*IIMRD*, Mysuru
IIMRD JOURNALS
www.iimrd.com

# ಜಾಗತೀಕರಣ, ದುರ್ಬಲಗೊಳ್ಳುತ್ತಿರುವ ರಾಜ್ಯ ಮತ್ತು ಸಮಾಜಕಲ್ಯಾಣದ ಸವಾಲುಗಳು

**ಡಾ. ಈರಣ್ಣ ಚ ಮುಳಗುಂದ***

*ಸಹ ಪ್ರಾಧ್ಯಾಪಕರು, ಸಮಾಜಶಾಸ್ತ್ರ ವಿಭಾಗ, ಕರ್ನಾಟಕ ಕಲಾ ಮಹಾವಿದ್ಯಾಲಯ, ಧಾರವಾಡ.

**ಸಾರಾಂಶ: (Abstract)**

*ಜಾಗತೀಕರಣ, ಖಾಸಗೀಕರಣ ಮತ್ತು ಉದಾರೀಕರಣ ಇವು ಮೂರೂ ಸಮಕಾಲೀನ ಜಗತ್ತನ್ನು ಪ್ರಭಾವಿಸಿದ ಪ್ರಮುಖ ಅಂಶಗಳು ಮತ್ತು ಪ್ರಕ್ರಿಯೆಗಳು. ಈ ಮೊದಲು ಈ ಜಗತ್ತನ್ನು ಕೈಗಾರಿಕೀಕರಣ, ನಗರೀಕರಣ ಮತ್ತು ಆಧುನೀಕರಣಗಳು ಪ್ರಭಾವಿಸಿದ್ದವು. ಜಗತ್ತಿನಲ್ಲಿರುವ ಪ್ರತಿಯೊಂದು ದೇಶ ಮತ್ತು ದೇಶದಲ್ಲಿನ ಬಹಳಷ್ಟು ವಿದ್ಯಮಾನಗಳ ಮೇಲೆ ಇವು ಒಂದಲ್ಲ ಒಂದು ರೀತಿಯಲ್ಲಿ ಪ್ರಭಾವ ಬೀರಿವೆ. ಇವುಗಳು ಮುಂದುವರೆದ ದೇಶಗಳಲ್ಲಿ ಒಂದು ರೀತಿಯ ಪರಿಣಾಮ ಬೀರಿದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳಂಥ ಅಭಿವೃದ್ಧಿಶೀಲ ದೇಶಗಳಲ್ಲಿ ಮತ್ತೊಂದು ರೀತಿಯ ಪರಿಣಾಮ ಬೀರಿವೆ. ಜಾಗತೀಕರಣವು ಭಾರತದಲ್ಲಿನ ಶ್ರಮಿಕ ವರ್ಗಗಳು, ರೈತರು, ಮಹಿಳೆಯರು, ರೋಗಿಗಳು, ವೃದ್ಧರು ಮುಂತಾದ ದುರ್ಬಲ ಜನಸಮುದಾಯಗಳ ಮೇಲೆ ಹಾನಿಕಾರಕ ಪರಿಣಾಮಗಳನ್ನು ಬೀರಿದೆ. ಇದನ್ನು ಮಾನವ ಹಕ್ಕುಗಳಿಗೆ ದೊಡ್ಡ ಬೆದರಿಕೆಯೆಂದು ಕೆಲವು ವಿದ್ವಾಂಸರು ಪರಿಗಣಿಸಿದ್ದಾರೆ. ವಿದೇಶಗಳಲ್ಲಿ ಇದು ಯುವಕರು, ಜನಾಂಗೀಯ ಅಲ್ಪಸಂಖ್ಯಾತರು, ಹೊಸದಾಗಿ ಬಂದ ವಲಸಿಗರು ಮುಂತಾದವರನ್ನು ಪ್ರಭಾವಿಸಿದ್ದುಂಟು. ಪ್ರಸ್ತುತ ಲೇಖನವು ಜಾಗತೀಕರಣ ಮತ್ತು ಸಮಾಜ ಕಲ್ಯಾಣದ ನಡುವಿನ ಜಟಿಲ ಸಂಬಂಧದ ಮೇಲೆ ಬೆಳಕು ಚೆಲ್ಲುತ್ತದೆ.*

**ಮುಖ್ಯಪದಗಳು (Keywords):** ಜಾಗತೀಕರಣ, ಖಾಸಗೀಕರಣ, ಉದಾರೀಕರಣ, ಸಮಾಜಕಲ್ಯಾಣ, ಕಲ್ಯಾಣ ರಾಜ್ಯ.

## ಪೀಠಿಕೆ

ಸಮಾಜ ಕಲ್ಯಾಣದ ಬೇರುಗಳು ಇತಿಹಾಸದಲ್ಲಿ ಚಾಚಿವೆ. ಈ ಮೊದಲು ಯುರೋಪಿನ ದೇಶಗಳಲ್ಲಿ ಸಮಾಜ ಕಲ್ಯಾಣವು ಮೊದಲು ಚರ್ಚುಗಳ ವ್ಯಾಪ್ತಿಯಲ್ಲಿ ಬರುತ್ತಿತ್ತು. ಇಂಗ್ಲೆಂಡಿನಲ್ಲಿನ ಪಾರ್ಲಿಮೆಂಟ್ ಎಲಿಜಾಬೇಥಿಯನ್ ಪೂರ್ ಲಾ ಅನ್ನು 1601 ರಲ್ಲಿ ಜಾರಿಗೆ ತರುವುದರೊಂದಿಗೆ ಸಮಾಜ ಕಲ್ಯಾಣವು ಸಂಘಟಿತ ರೂಪ ಪಡೆಯಿತು. ಯುದ್ಧಗಳು, ತ್ವರಿತ ಕೈಗಾರಿಕೀಕರಣ, ನಗರೀಕರಣದಂಥ ಕೆಲವು ಅಂಶಗಳು ಬಡವರ ಜೀವನದಲ್ಲಿ ಸಂಕಷ್ಟಗಳ ಸರಮಾಲೆಗಳನ್ನು ಸೃಷ್ಟಿಸಿದವು. ಇವುಗಳ ಮುಖ್ಯ ಉದ್ದೇಶವು ಬಡವರ ಜೀವನದಲ್ಲಿ ಸುಧಾರಣೆ ತರುವುದಾಗಿತ್ತು. ನಂತರ ಯುರೋಪಿನ ಸಮಾಜದಲ್ಲಿ ಗ್ರೇಟ್ ಡಿಪ್ರೆಶನ್,

*Please cite this article as: ಈರಣ್ಣ ಚ ಮುಳಗುಂದ.* (2023). ಜಾಗತೀಕರಣ, ದುರ್ಬಲಗೊಳ್ಳುತ್ತಿರುವ ರಾಜ್ಯ ಮತ್ತು ಸಮಾಜಕಲ್ಯಾಣದ ಸವಾಲುಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 5(2). ಪು.ಸಂ.* 14–21

ವಲಸೆಯಂಥ ಕೆಲವು ಅಂಶಗಳಿಂದಾಗಿ ರಾಜ್ಯವು ಸಮಾಜ ಕಲ್ಯಾಣಕ್ಕೆ ಅತ್ಯಧಿಕ ಮಹತ್ವ ನೀಡತೊಡಗಿತು. ಬಂಡವಾಳಶಾಹಿ ವ್ಯವಸ್ಥೆಯಿಂದ ಕಾರ್ಮಿಕ ವರ್ಗವು ಅಪಾರ ಶೋಷಣೆಗೆ ಒಳಗಾಯಿತು. ಮತ್ತೊಂದೆಡೆ ಯುರೋಪಿನ ಸಮಾಜದಲ್ಲಿ ನಿರುದ್ಯೋಗ ಸಮಸ್ಯೆ ಬೃಹದಾಕಾರವಾಗಿ ಬೆಳೆಯಿತು. ಜನಾಂಗ ಹಿನ್ನೆಲೆಗೆ ಅತ್ಯಧಿಕ ಮಹತ್ವ ಕೊಟ್ಟ ಕಾರಣದಿಂದ ಜನಾಂಗೀಯ ಅಲ್ಪಸಂಖ್ಯಾತರು ಅಭಿವೃದ್ಧಿಯ ಫಲಗಳಿಂದ ವಂಚಿತರಾದರು ಮತ್ತು ಸಮಾಜದ ಅಂಚಿಗೆ ನೂಕಲ್ಪಟ್ಟರು. ಗುಲಾಮಗಿರಿಯಿಂದ ಹೊರಬಂದವರ ಸಮಸ್ಯೆಗಳು ಸಾವಿರದಷ್ಟಿದ್ದವು. ಈ ಎಲ್ಲ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಮಾಜ ಕಲ್ಯಾಣದ ಪರಿಕಲ್ಪನೆ ಕಾಣಿಸಿಕೊಂಡಿತು. ಮತಾತೀಕರಣದಿಂದಾಗಿ ಧರ್ಮದ ಹಿಡಿತದಲ್ಲಿದ್ದ ಸಾಮಾಜಿಕ ಕಲ್ಯಾಣವು ರಾಜ್ಯದ ವ್ಯಾಪ್ತಿಗೆ ಬಂದಿತು. ಕಲ್ಯಾಣ ರಾಜ್ಯಗಳು ಸಂಘಟಿತ ಪ್ರಯತ್ನದ ಮೂಲಕ ಸಮಾಜ ಕಲ್ಯಾಣ ಚಟುವಟಿಕೆಗಳಿಗೆ ಸಾಂಸ್ಥಿಕ ರೂಪ ಕೊಟ್ಟವು ಎನ್ನಬಹುದು.

**ಪ್ರಸ್ತುತ ಅಧ್ಯಯನದ ಉದ್ದೇಶಗಳು**

ಪ್ರಸ್ತುತ ಸಂಶೋಧನಾ ಲೇಖನದ ಮುಖ್ಯ ಉದ್ದೇಶಗಳೆಂದರೆ:

- ಜಾಗತೀಕರಣ ಮತ್ತು ಸಮಾಜ ಕಲ್ಯಾಣದ ನಡುವಿನ ಸಂಬಂಧದ ಮೇಲೆ ಬೆಳಕು ಚೆಲ್ಲುವುದು ;
- ಜಾಗತೀಕರಣದಿಂದ ಶ್ರಮಿಕರು, ರೋಗಿಗಳು, ಅಂಗವಿಕಲರು, ಸಣ್ಣರೈತರ ಮೇಲಾಗುವ ಪರಿಣಾಮಗಳನ್ನು ಪರಿಶೋಧಿಸುವುದು ;
- ಜಾಗತೀಕರಣದಿಂದಾಗುವ ಮಾನವಹಕ್ಕುಗಳ ಮೇಲಾಗುವ ಪರಿಣಾಮಗಳನ್ನು ವಿಶ್ಲೇಷಿಸುವುದು.

**ಅಧ್ಯಯನ ವಿಧಾನ–ದತ್ತಾಂಶದ ಮೂಲಗಳು, ಇತಿಮಿತಿಗಳು**

ಜಾಗತೀಕರಣದಿಂದ ಉಂಟಾಗುವ ಪರಿಣಾಮಗಳನ್ನು ವಿಶ್ಲೇಷಿಸಲು ಪ್ರಸ್ತುತ ಲೇಖನವು ಮಾಧ್ಯಮಿಕ ಆಕರದ ಮೂಲಗಳನ್ನು ಮಾತ್ರ ಪರಿಗಣಿಸುತ್ತದೆ. ಜಾಗತೀಕರಣದಿಂದ ವ್ಯಕ್ತಿ, ಕುಟುಂಬದಂಥ ಸೂಕ್ಷ್ಮ ಘಟಕಗಳ ಮೇಲೆ ಅದರಂತೆ ಮಾನವಹಕ್ಕುಗಳು, ಸಮಾಜ ಕಲ್ಯಾಣ, ಶ್ರಮಿಕ ಮಾರುಕಟ್ಟೆ, ರೈತಾಪಿ ಸಮೂಹಗಳಂಥ ವಿಶಾಲ ವಿಷಯಗಳ ಮೇಲೆ ಮತ್ತು ಘಟಕಗಳ ಮೇಲೆ ಪರಿಣಾಮ ಬೀರುತ್ತದೆ. ಆದರೆ ಪ್ರಸ್ತುತ ಲೇಖನವು ಜಾಗತಿಕರಣದಿಂದ ಮಾನವ ಸಮಾಜದ ವಿಶಾಲಲಕ್ಷ ವಿಷಯಗಳ ಮೇಲಾದ ಪರಿಣಾಮಗಳ ಮೇಲೆ ಹೆಚ್ಚಿನ ಗಮನ ಹರಿಸುತ್ತದೆ. ಇದೊಂದು ವಿವರಣಾತ್ಮಕ ಅಧ್ಯಯನ ವಿಧಾನ ಹೊಂದಿದ ಲೇಖನವಾಗಿದೆ.

**ಜಾಗತೀಕರಣದ ಅರ್ಥ** (Meaning of Globalisation)

ಮಿಶ್ರಾ ಎಸ್.ಕೆ. ಮತ್ತು ವಿ.ಕೆ. ಪುರಿ ತಮ್ಮ *Indian Economy* ಎಂಬ ಪುಸ್ತಕದಲ್ಲಿ **"**ಒಂದು ದೇಶದ ಆರ್ಥಿಕ ವ್ಯವಸ್ಥೆಯನ್ನು ವಿಶ್ವದ ಆರ್ಥಿಕ ವ್ಯವಸ್ಥೆಯ ಜೊತೆ ಸಂಯೋಜಿಸುವುದೇ ಜಾಗತೀಕರಣ**"** ಎಂದು ಬರೆಯುತ್ತಾರೆ. ಆದರೆ ದತ್ತ ಮತ್ತು ಸುಂದರಂ ಎಂಬ ಗ್ರಂಥಕರ್ತರು ತಮ್ಮ *Indian Economy* ಎಂಬ ಗ್ರಂಥದಲ್ಲಿ ರಾಷ್ಟ್ರಗಳನ್ನು ವಿಶ್ವ ವ್ಯಾಪಾರ ಸಂಘಟನೆಯ ಚೌಕಟ್ಟಿನಲ್ಲಿ ಇತರ ರಾಷ್ಟ್ರಗಳೊಂದಿಗೆ ಸಂಯೋಜಿಸುವುದನ್ನು ಸೂಚಿಸುವ ರಮ್ಯ ಪದವು ಜಾಗತೀಕರಣವೆಂದು ಉಲ್ಲೇಖಿಸಿದ್ದಾರೆ ಆದರೆ ಉಮಾ

ಕಪಿಲಾ ತಮ್ಮ *Understanding Problems of Indian Economy* ಎಂಬ ಲೇಖನದಲ್ಲಿ ರಕ್ಷಣಾ ಪದರ/ಕವಚದೊಳಗಿನ ರಾಷ್ಟ್ರಗಳನ್ನು ಹೊರತಂದು ನವ ಜಾಗತಿಕ ವ್ಯವಸ್ಥೆಯತ್ತ ಸಾಗುತ್ತಿರುವ ಇತರ ರಾಷ್ಟ್ರಗಳೊಂದಿಗೆ ಅವುಗಳನ್ನು ಸೇರಿಸುವುದೇ ಜಾಗತೀಕರಣ ಪ್ರಕ್ರಿಯೆಯೆಂದು ಬರೆಯುತ್ತಾರೆ. ಒಂದು ದೇಶದ ಆರ್ಥಿಕ ವ್ಯವಸ್ಥೆಯನ್ನು ವಿಶ್ವ ಆರ್ಥಿಕ ವ್ಯವಸ್ಥೆಯೊಂದಿಗೆ ಸಂಯೋಜಿಸುವಾಗ ಪ್ರತಿಯೊಂದು ದೇಶದಲ್ಲಿ ಕೆಲವು ಪರಿವರ್ತನೆಗಳು ಸಹಜವಾಗಿ ಆಗುತ್ತವೆ. ಇವುಗಳಲ್ಲಿ ಕೆಲವು ಸಾಮಾಜಿಕ ಕಲ್ಯಾಣಕ್ಕೆ ಬೆದರಿಕೆಯೊಡ್ಡಬಹುದು ಮತ್ತು ಒಡ್ಡುತ್ತಲಿವೆ. ಸಮಾಜದಲ್ಲಿ ಉಂಟಾಗುವ ಕೆಲವು ಪರಿವರ್ತನೆಗಳು ಕೆಲವರಿಗೆ ಮಾತ್ರ ಲಾಭ ಕೊಡುತ್ತವೆ. ಹೇಗೆಂದರೆ ಸಾಕ್ಷರರು, ಕುಶಲಕರ್ಮಿಗಳು, ಪುರುಷರು, ನಗರವಾಸಿಗಳು, ಸಮಾಜದ ಉನ್ನತ ಅಂತಸ್ತಿನಲ್ಲಿರುವಂಥವರು ಅಲ್ಪಸ್ವಲ್ಪ ತೊಂದರೆಗಳಿಗೆ ಒಳಗಾದರೂ ತಮ್ಮಲ್ಲಿನ ಸಾಕ್ಷರತೆ, ಶಿಕ್ಷಣ, ಬಂಡವಾಳ, ಸಂಪತ್ತಿನ ಬಲದಿಂದ ಪರಿವರ್ತನೆಗಳ ಜೊತೆಗೆ ಹೊಂದಿಕೊಂಡು ಹೋಗುತ್ತಾರೆ. ಇಲ್ಲವೇ ಪರಿವರ್ತನೆಗಳು ತಮಗೆ ಅನುಕೂಲವಾಗುವ ಹಾಗೆ ಜರುಗುವಂತೆ ಮಾಡಲು ಯತ್ನಿಸುತ್ತಾರೆ. ಯಾವುದೇ ಹೊಸ ಪರಿವರ್ತನೆಗಳಿಗೆ ದೊಡ್ಡ ಬೆಲೆ ತೆರುವವರೆಂದರೆ ಸಮಾಜದಲ್ಲಿನ ದುರ್ಬಲ ವರ್ಗಗಳು ಮತ್ತು ಸೀಮಾಂತ ಸಮೂಹಗಳು. ಅದೇ ಪ್ರಕಾರ ಜಾಗತೀಕರಣದಿಂದ ದೊಡ್ಡ ಹಾನಿಗೊಳದಾವರೆಂದರೆ ಅಕುಶಲರು, ನಿರಕ್ಷರಿಗಳು, ಮಹಿಳೆಯರು ಮತ್ತು ಸಣ್ಣ ರೈತರು, ಕಾರ್ಮಿಕ ವರ್ಗದ ಸದಸ್ಯರು.

**ಸಮಾಜ ಕಲ್ಯಾಣದ ಅರ್ಥ (Meaning of Social Welfare)**

ಯಾರಿಗೆ ಒಂದಲ್ಲ ಒಂದು ಕಾರಣದಿಂದ ತಮ್ಮ ಕಾಳಜಿಯನ್ನು ತೆಗೆದುಕೊಳ್ಳಲು ಆಗುವುದಿಲ್ಲವೋ ಅವರೆಲ್ಲರಿಗೂ ಸಮಾಜ ಕಲ್ಯಾಣದ ಆವಶ್ಯಕತೆಯಿರುತ್ತದೆ. ಅಂಥ ವ್ಯಕ್ತಿಗಳು ಸಮಾಜಕಲ್ಯಾಣ ಕಾರ್ಯಕ್ರಮಗಳ ಗುರಿಸಮೂಹದಲ್ಲಿ ಬರುತ್ತಾರೆ. ಎಲ್ಲ ದೇಶಗಳಲ್ಲಿ ಈ ವಿಚಾರ ಕುರಿತಂತೆ ಸಹಮತವಿದೆ. ಈ ದೃಷ್ಟಿಕೋನದಿಂದ ನೋಡಿದರೆ ರೋಗಿಗಳು, ಮಕ್ಕಳು, ವೃದ್ಧರು, ಅಂಗವಿಕಲರು, ನಿರುದ್ಯೋಗಿಗಳ ಕಲ್ಯಾಣದತ್ತ ಗಮನಹರಿಸುವುದು ನಾಗರಿಕ ಸಮಾಜದ ಹೊಣೆಗಾರಿಕೆಯಾಗಿರುತ್ತದೆ. ಇದರಲ್ಲಿ ಬರುವ ಮತ್ತಿತರ ಸಮೂಹಗಳೆಂದರೆ ಬಡವರು, ಭಿಕ್ಷುಕರು, ವಸತಿಹೀನರು. ಗರ್ಭಿಣಿಯರು ಮತ್ತು ಶಿಶುಗಳೂ ಸಮಾಜ ಕಲ್ಯಾಣದ ಲಾಭ ಪಡೆಯಲು ಅರ್ಹರಾಗಿರುತ್ತಾರೆ. ಅನಾನುಕೂಲತೆ ಹೊಂದಿರುವ ಸಮೂಹಗಳಿಗೆ ನೆರವಾಗುವ ಸಂಘಟಿತ ಮತ್ತು ಖಾಸಗಿ ಸೇವೆಗಳನ್ನು ಸಮಾಜ ಕಲ್ಯಾಣವೆನ್ನುತ್ತಾರೆಂದು ಮರಿಯಮ್ ವೆಬಸ್ಟರ್ ಶಬ್ದಕೋಶವು ವ್ಯಾಖ್ಯಾನಿಸುತ್ತದೆ. ಕೆಲವರ ಪ್ರಕಾರ ಒಂದು ರಾಷ್ಟ್ರದಲ್ಲಿನ ಪ್ರಜೆಗಳಿಗೆ ಉತ್ತಮವಾಗಿ ಜೀವಿಸಲು ನೆರವಾಗುವ ಕಾರ್ಯಕ್ರಮಗಳ ಒಂದು ಸಮೂಹವು ಸಮಾಜಕಲ್ಯಾಣವಾಗಿರುತ್ತದೆ. ಇದರ ಮುಖ್ಯ ಉದ್ದೇಶವೆಂದರೆ ಸಮಾಜದ ಸದಸ್ಯರಿಗೆ ಉತ್ತಮ ಗುಣಮಟ್ಟದ ಸೇವೆ ನೀಡುವುದು.

**ಚರ್ಚೆ ಮತ್ತು ಫಲಿತಾಂಶ**

**ಭಾರತದಲ್ಲಿ ಸಮಾಜ ಕಲ್ಯಾಣದ ಮಹತ್ವ (Importance of Social Welfare in India)**

ವಿದ್ಯಾಂಸರ ಪ್ರಕಾರ ಸಮಾಜ ಕಲ್ಯಾಣವು ಪುನರ್‌ವಿತರಣೆ, ಸಾಮಾಜಿಕ ಅಂಟಿಕೆ ಮತ್ತು ಐಕ್ಯತೆ ಸಾಧಿಸಲು ಇರುವ ಪ್ರಮುಖ ಸಾಧನವಾಗಿದೆ. (Social Welfare is an important tool for

redistribution, social cohesion and Social Solidarity). ಇದರಿಂದ ಸಾಮಾಜಿಕ ನ್ಯಾಯವನ್ನು ನಾವು ಜನರಿಗೆ ನೀಡಬಹುದು. ಲಾಭವಂಚಿತ ಸೀಮಾಂತ ಸಮೂಹಗಳ ಜೀವನವನ್ನು ನಾವು ಸಮಾಜಕಲ್ಯಾಣದ ಮೂಲಕವೇ ನಾವು ಸುಧಾರಿಸಬಹುದು.ಅಮೆರಿಕೆಯಲ್ಲಿ ಸಮಾಜಕಲ್ಯಾಣವು ವಿವಿಧ ಸಾಮಾಜಿಕ ವ್ಯಾಧಿಗಳು ಅಂದರೆ ರೋಗಗಳಿಗೆ ಪರಿಹಾರ ಸೂಚಿಸಲು ಬೆಳೆದುಬಂದಿತು.

ಭಾರತದಲ್ಲಿ ಕಲ್ಯಾಣ ಕಾರ್ಯಕ್ರಮಗಳ ಆವಶ್ಯಕತೆ ಅತೀ ಹೆಚ್ಚಿಗಿರುವುದಕ್ಕೆ ಕಾರಣಗಳೆಂದರೆ ಭಾರತದಲ್ಲಿ 6.7 % ಜನರು ಬಡತನ ರೇಖೆಯ ಕೆಳಗೆ ವಾಸಿಸುತ್ತಿದ್ದಾರೆ. ಇಲ್ಲಿರುವ ಅನಾಥರ ಸಂಖ್ಯೆಯೇ 2 ಕೋಟಿಯಷ್ಟಿದೆ. 138 ದಶಲಕ್ಷ ಜನರು ವೃದ್ಧರು. 2.1 ಮಿಲಿಯನ್ ಜನರು ಏಡ್ಸ್ ರೋಗಿಗಳು. 13.9 ಲಕ್ಷ ಜನರು ಕ್ಯಾನ್ಸರ್ ರೋಗಿಗಳು. 2.1 % ಜನರು ಅಂಗವಿಕಲರು. ಇವರನ್ನು ದಿವ್ಯಾಂಗರು ಎಂದು ಕರೆಯುತ್ತಾರೆ. 1.8 ಮಿಲಿಯನ್ ಜನರಿಗೆ ತಲೆಯ ಮೇಲೆ ಸೂರು ಇಲ್ಲ. ಇವರ ಜೀವನ ಸುಧಾರಿಸಲು ಸಮಾಜ ಕಲ್ಯಾಣ ಕಾರ್ಯಕ್ರಮಗಳ ಆವಶ್ಯಕತೆಯಿದೆ. ಅದರಂತೆ ಭಾರತವು ಇಂದಿನ 21 ನೇ ಶತಮಾನದಲ್ಲಿಯೂ ಕೃಷಿ ಪ್ರಧಾನದೇಶವಾಗಿ ಮುಂದುವರೆದಿದೆ. ಇಲ್ಲಿ ಸಣ್ಣ ರೈತರ ಸಂಖ್ಯೆಯೂ ಬಹು ದೊಡ್ಡದು. ಜಾಗತೀಕರಣ ಋಣಾತ್ಮಕ ಪರಿಣಾಮಗಳಿಂದ ಇವರನ್ನು ರಕ್ಷಿಸುವುದು ಸವಾಲಿನ ಕೆಲಸ. ಅದರಂತೆ ವೃದ್ಧರ ಸಂಖ್ಯೆ ಮತ್ತು ಬಡತನ ರೇಖೆಯ ಕೆಳಗಿರುವವರ ಸಂಖ್ಯೆ ದೊಡ್ಡದು. ಇವರೆಲ್ಲರ ಕಲ್ಯಾಣವನ್ನು ಮಾಡುವುದು ಭಾರತದಂಥ ಕಲ್ಯಾಣರಾಜ್ಯದ ಆದ್ಯ ಕರ್ತವ್ಯವೇ ಆಗಿರುತ್ತದೆ. ಅಂದಾಗ ಮಾತ್ರವೇ ಸಮಾಜದ ಅಂಚಿನಲ್ಲಿರುವ ಈ ಸೀಮಾಂತ ಸಮೂಹಗಳನ್ನು ರಾಷ್ಟ್ರದ ಮುಖ್ಯವಾಹಿನಿಗೆ ತರಬಹುದು. ಇಂಥ ಒಂದು ದೇಶದಲ್ಲಿ ಸಮಾಜಕಲ್ಯಾಣ ಒಂದು ಸವಾಲಿನ ಕೆಲಸವೇ ಸರಿ. ಅದಕ್ಕಾಗಿ ದೊಡ್ಡ ಪ್ರಮಾಣದ ಸಂಪನ್ಮೂಲಗಳನ್ನು ರಾಜ್ಯವು ಖರ್ಚು ಮಾಡಬೇಕಾಗುತ್ತದೆ. ಆದರೆ ಜಾಗತೀಕರಣ/ಉದಾರೀಕರಣ/ ಖಾಸಗೀಕರಣಗೊಂಡ ಜಗತ್ತು ಇವರ ಕಲ್ಯಾಣ ಕಾರ್ಯಕ್ರಮಗಳನ್ನು ನಕಾರಾತ್ಮಕವಾಗಿ ಪ್ರಭಾವಿಸಬಲ್ಲದು.

**ಜಾಗತೀಕರಣದ ನಕಾರಾತ್ಮಕ ಪರಿಣಾಮಗಳು ಮತ್ತು ಇದರಿಂದ ಉದ್ಭವಿಸಿದ ಸಮಾಜ ಕಲ್ಯಾಣದ ಆವಶ್ಯಕತೆ**

- **ಜಾಗತೀಕರಣವು ಶ್ರಮಿಕ ವರ್ಗದ ಶೋಷಣೆಗೆ ದಾರಿಮಾಡಿಕೊಡುತ್ತದೆ. ಇದರಿಂದ ಅವರ ಕಲ್ಯಾಣವು ರಾಜ್ಯಕ್ಕೆ ಸವಾಲಿನ ಕೆಲಸವಾಗಿ ಪರಿಣಮಿಸಿದೆ** (Globalisation leads to exploitation of labours. Hence, achieving welfare of labours became a challenge): ಜಾಗತೀಕರಣದಿಂದ ನೇರ ಪ್ರಭಾವಕ್ಕೊಳಗಾಗುವ ಜನಸಮೂಹವೆಂದರೆ ಕಾರ್ಮಿಕರದ್ದು. ಜಾಗತೀಕರಣವು ಜಗತ್ತಿನಲ್ಲಿರುವ ಶ್ರಮಿಕ ವರ್ಗಗಳನ್ನು ಪ್ರಭಾವಿಸುತ್ತಲಿದೆ. ಅವರ ಅಂತಸ್ತು ಮತ್ತು ಸ್ಥಾನಮಾನದಲ್ಲಿ ಇದು ದೂರಗಾಮಿ ಪರಿವರ್ತನೆಗಳನ್ನು ತಂದಿದೆ. ಮುಂದುವರೆದ ದೇಶಗಳಲ್ಲಿ ಕೂಲಿದರ ಹೆಚ್ಚಿಗೆ ಇರುವುದರಿಂದ ಅಲ್ಲಿನ ಉದ್ಯೋಗಗಳು ಹೊರದೇಶಕ್ಕೆ ಹೋಗುತ್ತವೆ. ಅಲ್ಲಿನ ಉದ್ಯಮಶೀಲರು ವಸ್ತುಗಳ ನಿರ್ಮಾಣ ವೆಚ್ಚವನ್ನು ತಗ್ಗಿಸಲು ತಮ್ಮ ದೇಶದಲ್ಲಿನ ಕೈಗಾರಿಕೆಗಳನ್ನು ಚೀನಾ, ಭಾರತ, ಏಷಿಯಾದ ಇತರ ದೇಶಗಳಲ್ಲಿ ಸ್ಥಾಪಿಸುತ್ತಾರೆ. ಹೊರಗುತ್ತಿಗೆ ಕೊಡುವುದರ ಮೂಲಕ ವಸ್ತುಗಳ ಉತ್ಪಾದನಾ ವೆಚ್ಚ ತಗ್ಗಿಸುವುದು ಮುಂದುವರೆದ ದೇಶಗಳಲ್ಲಿನ ಒಂದು ಪ್ರವೃತ್ತಿ. ಇದರಿಂದ ಮುಂದುವರೆದ ದೇಶಗಳಲ್ಲಿನ ಜನರು

ನಿರುದ್ಯೋಗ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆದರೆ ಅಭಿವೃದ್ಧಿಶೀಲ ದೇಶಗಳಲ್ಲಿ ಹೊರಗುತ್ತಿಗೆಯಿಂದ ಉದ್ಯೋಗಾವಕಾಶಗಳು ಸೃಷ್ಟಿಸಲ್ಪಡುತ್ತವೆ. ಆದರೆ ಈ ದೇಶಗಳಲ್ಲಿನ ಕಾರ್ಮಿಕರು ಹೆಚ್ಚಿನ ಕೂಲಿಗೆ ಆಗ್ರಹಿಸುವಂತಿಲ್ಲ. ಕೊಟ್ಟಷ್ಟು ಕೂಲಿಯನ್ನು ತೆಗೆದುಕೊಂಡು ದುಡಿಯಬೇಕಾಗುತ್ತದೆ. ಈ ರೀತಿ ಜಾಗತೀಕರಣವು ಮುಂದುವರೆದ ದೇಶಗಳಲ್ಲಿ ನಿರುದ್ಯೋಗ ಸಮಸ್ಯೆಯನ್ನು ಸೃಷ್ಟಿಸಿದರೆ, ಹಿಂದುಳಿದ ದೇಶಗಳಲ್ಲಿ ಕಾರ್ಮಿಕರ ಶೋಷಣೆಗೆ ದಾರಿಮಾಡಿಕೊಟ್ಟಿದೆ. ಇದರಿಂದ ಶ್ರಮಿಕವರ್ಗಗಳ ಕಲ್ಯಾಣವು ರಾಜ್ಯಕ್ಕೆ ಸವಾಲಿನ ಕೆಲಸವಾಗಿ ಪರಿಣಮಿಸಿದೆ.

- **ಜಾಗತೀಕರಣವು ಯಾಂತ್ರೀಕರಣ, ಸ್ವಯಂಚಾಲಿತ ಯಂತ್ರಗಳ ಬಳಕೆಗೆ ಉತ್ತೇಜನವೀಯುವುದರ ಮೂಲಕ ನಿರುದ್ಯೋಗ ಸಮಸ್ಯೆ ಸೃಷ್ಟಿಸಿದೆ** (Globalisation encourages automation, use of machines resulting in job displacement. Hence, there is a need to implement reforms for the welfare of labours): ಜಾಗತೀಕರಣದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಸ್ವಯಂಚಾಲಿತ ಯಂತ್ರಗಳು, ಯಂತ್ರಮಾನವರು, ಯಾಂತ್ರಿಕರಣಕ್ಕೆ ದಾರಿಮಾಡಿಕೊಟ್ಟಿದೆ. ಯಾಂತ್ರೀಕರಣವು ಜಾಗತೀಕರಣ ಮತ್ತು ಅಸಮಾನತೆಗೆ ದಾರಿಮಾಡಿಕೊಟ್ಟಿದೆಯೆಂದು ಕ್ರಿಸ್ಟೋಫರ್ ಮ್ಯಾಥ್ಯೂ (2017) ಬರೆಯುತ್ತಾರೆ. ಯಾಂತ್ರೀಕರಣವು ಜಾಗತೀಕರಣದ ಕಾರಣವೂ ಆಗಿದೆ ಮತ್ತು ಪರಿಣಾಮವೂ ಆಗಿದೆ. ಯಾಂತ್ರೀಕರಣದಿಂದ ಶ್ರಮಿಕರು ನಿರುದ್ಯೋಗಿಗಳಾಗುತ್ತಿದ್ದಾರೆ. ಅವರು ಕೆಲಸ ಕಳೆದುಕೊಳ್ಳುವ ಭೀತಿಯಲ್ಲಿದ್ದಾರೆ. ಈ ರೀತಿ ಯಾಂತ್ರೀಕರಣ, ಸ್ವಯಂಚಾಲಿತ ಯಂತ್ರಗಳ ಬಳಕೆಗೆ ಉತ್ತೇಜನ, ಹೊರಗುತ್ತಿಗೆಯಂಥ ಆಚರಣೆಗಳು ಕಾರ್ಮಿಕ ವರ್ಗಕ್ಕೆ ದೊಡ್ಡ ಬೆದರಿಕೆಯಾಗಿ ಪರಿಣಮಿಸಿವೆಯೆನ್ನಬಹುದು. ಈ ರೀತಿ ಜಾಗತೀಕರಣದ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ಸಮಾಜ ಕಲ್ಯಾಣವು ಬೇಕಾಗುತ್ತದೆ.

- **ಜಾಗತೀಕರಣವು ಮಾನವಹಕ್ಕುಗಳಿಗೆ ಬೆದರಿಕೆಯನ್ನು ಒಡ್ಡಿದೆ** (Globalisation endangers human rights): ಜಾಗತಿಕರಣದಿಂದ ರಾಜ್ಯವು ದುರ್ಬಲವಾಗುತ್ತದೆಯೆಂದು ಹಲವು ವಿದ್ವಾಂಸರು ಕಳವಳ ವ್ಯಕ್ತಪಡಿಸುತ್ತಾರೆ. ರಾಜ್ಯವು ಮಾನವಹಕ್ಕುಗಳ ರಕ್ಷಕ. ಜನರಿಗೆ ಮಾನವಹಕ್ಕುಗಳನ್ನು ಕೊಡಮಾಡುವಲ್ಲಿ ರಾಜ್ಯದ ಪಾತ್ರ ಮಹತ್ವದ್ದು. ಜಾಗತೀಕರಣದಿಂದ ಮಾನವಹಕ್ಕುಗಳು ಉಲ್ಲಂಘಿಸಲ್ಪಡುತ್ತದೆ. ಜಾಗತಿಕರಣದಿಂದ ರಾಜ್ಯವು ಯಾವಾಗ ದುರ್ಬಲವಾಗುತ್ತದೆಯೋ ಆಗ ಅದು ಮಾನವಹಕ್ಕುಗಳನ್ನು ರಕ್ಷಿಸಲು ವಿಫಲವಾಗುತ್ತದೆ. ಅವರು ರಾಜ್ಯದ ಅಸ್ತಿತ್ವಕ್ಕೆ ಜಾಗತಿಕರಣದಿಂದ ಏನಾಗುತ್ತದೆಯೆಂಬುದನ್ನು ಎಂಬುದನ್ನು ಕುರಿತು ಕಾಸ್ಟಲ್ (**ಉಲ್ಲೇಖ** : ಫುಲ್ಚರ್ ಮತ್ತು ಸ್ಕಾಟ್, 549) ಈ ರೀತಿ ಬರೆಯುತ್ತಾರೆ : ಜಾಗತಿಕರಣವು ಮತ್ತು ಅದರ ವಿವಿಧ ಆಯಾಮಗಳು ರಾಷ್ಟ್ರೀಯ ಸಮುದಾಯಗಳ ಸ್ವಾಯತ್ತತೆ ಮತ್ತು ತೀರ್ಮಾನ ತೆಗೆದುಕೊಳ್ಳುವ ಶಕ್ತಿಯನ್ನು ಕುಗ್ಗಿಸುತ್ತದೆ.

- ಜಾಗತೀಕರಣದಿಂದ ವೈದ್ಯಕೀಯ ಔಷಧಗಳ ಬೆಲೆ ಹೆಚ್ಚುತ್ತದೆಯಾದ್ದರಿಂದ ಏಡ್ಸ್, ಕ್ಯಾನ್ಸರ್ ಮತ್ತು ಇತರ ಗಂಭೀರ ಸ್ವರೂಪದ ರೋಗಿಗಳ ಕಲ್ಯಾಣವು ಮತ್ತು ಅವರ ಆರೋಗ್ಯ ಸುಧಾರಣೆಯು ದೊಡ್ಡ ಸಮಸ್ಯೆಯಾಗಿ ಪರಿಣಮಿಸುತ್ತದೆ. ಜಾಗತೀಕರಣದಿಂದ ಬಹುರಾಷ್ಟ್ರೀಯ ಕಂಪನಿಗಳು ಇಂದು ವೈದ್ಯಕೀಯ ಕ್ಷೇತ್ರವನ್ನು ಪ್ರವೇಶಿಸಿ ಔಷಧಿ ಉತ್ಪಾದನೆಯ ಮೇಲೆ ಏಕಸ್ವಾಮಿತ್ವ ಸ್ಥಾಪಿಸಿವೆ. ದೇಶೀಯ ಔಷಧ ಉದ್ಯಮವು

ಹೆಚ್ಚೂ ಕಡಿಮೆ ನೆಲಕಚ್ಚಿದೆ. ಇದರಿಂದ ಬಡದೇಶಗಳಲ್ಲಿನ ರೋಗಿಗಳ ಉಪಚಾರವು ದೊಡ್ಡ ತಲೆನೋವಾಗಿ ಪರಿಣಮಿಸಿದೆ ಎಂದು ಸೆಮ್ಲಿ ಸೆಮಿನ್ ಮತ್ತು ಡೆಲಿಕ್ ಗುಲ್‌ಡಾಲ್ ತಮ್ಮ The Globalisation of Pharmaceutical Industry and The Growing Dependency of Developing Countries: The Case of Turkey : ಲೇಖನದಲ್ಲಿ ಟರ್ಕಿಯ ಉದಾಹರಣೆಯನ್ನು ಕೊಟ್ಟು ಬರೆಯುತ್ತಾರೆ.

- **ಜಾಗತೀಕರಣದ ಕಾರಣದಿಂದ ಕೃಷಿಕರು ಅಸ್ತಿರ ಸ್ವರೂಪದ ಬೆಳೆ ಮಾದರಿಯತ್ತ ವಾಲುತ್ತಿದ್ದಾರೆ.**

(Indian Farmers' are inclined towards unstable type of cropping pattern): ಭಾರತದ ಕೃಷಿಕರು ಈ ಮೊದಲು ಸಾಂಪ್ರದಾಯಿಕ ಕೃಷಿ ಪದ್ಧತಿ ಅನುಸರಿಸುತ್ತಿದ್ದರು. ಸಂಮಿಶ್ರ ಬೆಳೆತೆಗೆದುಕೊಳ್ಳುವ ಪದ್ಧತಿ ಅನುಸರಿಸುತ್ತಿದ್ದರು. ಈಗ ರೈತರು ಜಾಗತೀಕರಣದ ಕಾರಣದಿಂದ ಅಸ್ಥಿರ ಕ್ರಾಪಿಂಗ್ ಪದ್ಧತಿ ಆಚರಿಸುತ್ತಿದ್ದಾರೆ ಎಂದು ಹೇಳಲಾಗುತ್ತದೆ. ಇದು ಕೃಷಿಕರ ಕಲ್ಯಾಣವನ್ನು ನಕಾರಾತ್ಮಕವಾಗಿ ಪ್ರಭಾವಿಸಬಲ್ಲದು. ಬೇರೆದೇಶಗಳಿಂದ ಹತ್ತಿ, ರೇಶ್ಮೆ, ಗೋದಿಯನ್ನು ಆಮದು ಮಾಡಿಕೊಳ್ಳುವುದು ರೈತರಿಗೆ ಅಪಾಯಕಾರಿಯಾಗಿ ಪರಿಣಮಿಸಿದೆ. ಇದರಿಂದ ರೈತರ ಕಲ್ಯಾಣವು ರಾಜ್ಯಕ್ಕೆ ಹೊರೆಯಾಗಿ ಪರಿಣಮಿಸಿದೆ

ಜಾಗತೀಕರಣವು ಪಿಂಚಣಿ, ಕುಟುಂಬ ಮತ್ತು ನಿರುದ್ಯೋಗ ಭತ್ಯೆ ಮತ್ತು ಅವರಿಗೆ ಕೊಡಮಾಡುವ ಲಾಭಗಳು ಮತ್ತು ಶ್ರಮಮಾರುಕಟ್ಟೆ ನೀತಿಧೋರಣೆಗಳನ್ನು ಪ್ರಭಾವಿಸುವ ಮೂಲಕ ಸಮಾಜ ಕಲ್ಯಾಣದ ಮೇಲೆ ಪ್ರಭಾವ ಬೀರುತ್ತದೆಯೆಂದು ವಿದ್ವಾಂಸರು ವಿವರಿಸುತ್ತಾರೆ. ಈ ಮೊದಲು ಶಿಕ್ಷಣ, ವೈದ್ಯಕೀಯ ಸೇವೆ, ಜೀವವಿಮೆಯಂಥ ಕ್ಷೇತ್ರಗಳು ರಾಜ್ಯದ ವ್ಯಾಪ್ತಿಯಲ್ಲಿದ್ದವು. ಈ ಹಿಂದೆ ಅಂದರೆ ಎಲ್.ಪಿ.ಜಿ ತಮ್ಮ ಬಾಹುಗಳನ್ನು ಚಾಚುವುದಕ್ಕಿಂತ ಮುಂಚೆ ರಾಜ್ಯವು ಹಿಂದುಳಿದ ವರ್ಗಗಳಿಗೆ ಶಿಕ್ಷಣ ಸಂಸ್ಥೆಗಳಲ್ಲಿ ಮೀಸಲಾತಿ ಕೊಡುವ ಮೂಲಕ ಅವರ ಕಲ್ಯಾಣಕ್ಕೆ ಶ್ರಮಿಸುತ್ತಿತ್ತು. ಆದರೆ ಈಗ ಜಾಗತೀಕರಣ, ಖಾಸಗೀಕರಣದಿಂದ ಶಿಕ್ಷಣ ಕ್ಷೇತ್ರದಲ್ಲಿ ವಿದೇಶಿ ಮತ್ತು ಖಾಸಗಿಯವರು ವಿಶ್ವವಿದ್ಯಾಲಯ ಸ್ಥಾಪಿಸಿದ್ದಾರೆ. ಅವರು ಸಾಮಾಜಿಕ ನ್ಯಾಯಕ್ಕೆ ಬೆಲೆ ಕೊಡುವುದಿಲ್ಲ. ದುರ್ಬಲ ವರ್ಗಗಳಿಗೆ ಅವರು ಮೀಸಲಾತಿ ಕೊಡುವ ಬಗ್ಗೆ ಅವರು ಚಿಂತಿಸುವುದೇ ಇಲ್ಲ.

ಅದರಂತೆ ವೈದ್ಯಕೀಯ ಕ್ಷೇತ್ರದಲ್ಲಿ ಇಂದು ಖಾಸಗಿ ಮತ್ತು ವಿದೇಶಿಯರು ಬಂಡವಾಳ ಹೂಡುತ್ತಿದ್ದಾರೆ. ಇಲ್ಲಿ ಉತ್ತಮ ಗುಣಮಟ್ಟದ ವೈದ್ಯಕೀಯ ಸೇವೆಯೇನೋ ಸಿಗುತ್ತಿದೆ. ಆದರೆ ಅದು ಬಡವರ ಪಾಲಿಗೆ ಗಗನಕುಸುಮವಾಗಿದೆ. ಹೇಗಾದರೂ ಸರಿ ಲಾಭಗಳಿಸಬೇಕೆನ್ನುವುದು ಜಾಗತೀಕರಣದ ಮೂಲಮಂತ್ರ. ಇದರಿಂದ ಸಮಾಜಕಲ್ಯಾಣ ಮಾಡುವ ಚಟುವಟಿಕೆಗಳು ತಮ್ಮ ಮಹತ್ವ ಕಳೆದುಕೊಳ್ಳುತ್ತಲಿವೆ.

ಆದರೇ ಜಾಗತೀಕರಣವು ಸಮಾಜಕಲ್ಯಾಣ ಕೆಲಸಗಳಲ್ಲಿ ಉದ್ಯಮಿಗಳ ತೊಡಗುವುದಕ್ಕೂ ಮಹತ್ವ ಕೊಟ್ಟಿದೆ. ಕೆಲವು ವಿದೇಶಿ ಕಂಪನಿಗಳು ಮತ್ತು ದೊಡ್ಡ ಉದ್ದಿಮೆಗಳು ಅಭಿವೃದ್ಧಿಶೀಲ ದೇಶಗಳಲ್ಲಿನ ಸಮಾಜ ಕಲ್ಯಾಣಕ್ಕೆ ಮಹತ್ವ ಕೊಡುತ್ತಿದ್ದಾರೆ. ಕೆಲವು ಅಂಕಿಅಂಶಗಳ ಪ್ರಕಾರ ಭಾರತದಲ್ಲಿನ 75 ಟಾಪ್ ಕಂಪನಿಗಳು ಕಾರ್ಪೋರೇಟ್ ಸೋಶಿಯಲ್ಲ್ ರಿಸ್ಪಾನ್ಸಿಬಿಲಿಟೀಜ್ ಅಡಿಯಲ್ಲಿ ಹೋದ ಆರ್ಥಿಕ ವರ್ಷದಲ್ಲಿ ಸುಮಾರು 4000 ಕೋಟಿ ರೂಪಾಯಿಗಳನ್ನು ಸಮಾಜ ಕಲ್ಯಾಣದ ಮೇಲೆ ಖರ್ಚು ಮಾಡಿದ್ದವು ಎಂದು ಇಕನಾಮಿಕ್

ಟೈಮ್ಸ್ (Rajat Arora, ET Bureau) ಬರೆದಿದೆ. ಹೀಗೆ ಜಾಗತೀಕರಣವು ಸಮಾಜ ಕಲ್ಯಾಣ ಕಾರ್ಯಕ್ರಮಗಳನ್ನು ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಎರಡೂ ರೀತಿಯಲ್ಲಿ ಪ್ರಭಾವಿಸುತ್ತಲಿದೆ.

**ಸಮಾರೋಪ ಮತ್ತು ನಿರ್ಣಯಗಳು**

ಜಾಗತೀಕರಣ ಭಾರತವನ್ನು ಒಳಗೊಂಡಂತೆ ವಿಶ್ವದ ಇತರ ದೇಶಗಳಿಗೆ ಸಂಮಿಶ್ರ ಫಲಿತಾಂಶಗಳನ್ನು ಕೊಡಮಾಡಿದೆ. ಈಗಾಗಲೇ ತಿಳಿಸಿದಂತೆ ಉದಾರೀಕರಣ, ಖಾಸಗೀಕರಣ, ಜಾಗತೀಕರಣವೆಂಬ ಮೂರು ಮಾಂತ್ರಿಕ ಮತ್ತು ವಿಸ್ಮಯಕಾರಿ ಪ್ರಕ್ರಿಯೆಗಳು ಮುಂದುವರೆದ ದೇಶಗಳ ಮೇಲೆ ಒಂದು ಪರಿಣಾಮ ಬೀರಿದರೆ ಅಭಿವೃದ್ಧಶೀಲ ದೇಶಗಳ ಮೇಲೆ ಮತ್ತೊಂದು ರೀತಿಯ ಪರಿಣಾಮಗಳನ್ನು ಬೀರಿವೆ. ಫ್ರಾನ್ಸ್, ಅಮೆರಿಕೆ, ಬ್ರಿಟನ್, ಜರ್ಮನಿಯಂಥ ಕೆಲವು ಯುರೋಪಿನ ದೇಶಗಳು ನಮಗಿಂತ ಮೊದಲು ಶೈಕ್ಷಣಿಕ ಕ್ರಾಂತಿಯ ಪ್ರಭಾವಕ್ಕೆ ಒಳಪಟ್ಟಿದ್ದವು. ವೈಜ್ಞಾನಿಕ ಸಂಶೋಧನೆಗಳಲ್ಲಿ ಹೆಚ್ಚಿನವುಗಳು ಇಲ್ಲಿಯೇ ನಡೆದಿವೆ. ಸಂಶೋಧನೆ ಮತ್ತು ಅಭಿವೃದ್ಧಿ ಪರಂಪರೆಯನ್ನು ಈಗಾಗಲೇ ಹೊಂದಿದ್ದ ದೇಶಗಳು ಜಾಗತೀಕರಣದ ಸವಾಲುಗಳನ್ನು ಸುಲಭವಾಗಿ ಎದುರಿಸಿದವು. ಭಾರತದಂತೆ ಅಮೆರಿಕೆ, ಚೀನಾದಂತ ದೇಶಗಳು ವಸಾಹತುಗಳ ಹಿಡಿತದಲ್ಲಿ ನಲುಗಿದ್ದವು. ಆದರೆ ಅವು ಬಹು ಹಿಂದೆಯೇ ವಸಾಹತುಶಾಹಿಗಳ ಸಂಕೋಲೆಯಿಂದ ಮುಕ್ತವಾಗಿದ್ದವು. ಇವುಗಳು ಈ ಕಾರಣದಿಂದ ಜಾಗತೀಕರಣ ಒಡ್ಡಿದ ಸವಾಲುಗಳನ್ನು ನಮಗಿಂತ ಸಮರ್ಥವಾಗಿ ಎದುರಿಸಿದವು. ಫ್ರಾನ್ಸ್, ಇಂಗ್ಲಂಡದಂಥ ದೇಶಗಳು ಜಗತ್ತಿನ ಹಿಂದುಳಿದ ದೇಶಗಳನ್ನು ಶೋಷಿಸಿ ಬಂಡವಾಳ ಮತ್ತು ಸಂಪತ್ತನ್ನು ಕ್ರೋಢಿಕರಿಸಿಕೊಂಡಿದ್ದವು. ಇವೂ ಜಾಗತೀಕರಣದಿಂದ ಮೊದಲ ಸುತ್ತಿನಲ್ಲಿಯೇ ಲಾಭ ಪಡೆದುಕೊಂಡವು. ಆದರೆ ಭಾರತ, ಪಾಕಿಸ್ತಾನ, ಬಾಂಗ್ಲಾದೇಶಗಳಂತವು ತೀರ ಇತ್ತೀಚಿಗೆ ಸ್ವತಂತ್ರಗೊಂಡವುಗಳು. ಇವುಗಳು ಜಾಗತೀಕರಣದ ಫಲವನ್ನು ಪಡೆದುಕೊಂಡು ತಮ್ಮಲ್ಲಿನ ಜನತೆಯ ಕಲ್ಯಾಣದ ಸಾಧಿಸಬೇಕೆಂದರೆ ಇನ್ನು ಬಹಳಷ್ಟು ದೂರ ಕ್ರಮಿಸಬೇಕಿದೆ. ಆದರೆ ಭಾರತವು ಪ್ರಜಾಸತ್ತಾತ್ಮಕ ದೇಶವಾಗಿರುವುದರಿಂದ ಇಲ್ಲಿ ಇಲ್ಲ ಜನಸಮೂಹಗಳಿಗೆ ಅದರಲ್ಲಿಯೂ ಅಲ್ಪಸಂಖ್ಯಾತರು, ದಲಿತರು ಮತ್ತು ಮಹಿಳೆಯರ ಶಿಕ್ಷಣಕ್ಕೆ ಮಹತ್ವ ಕೊಡಲಾಗಿದೆ. ಇದರಿಂದ ಬರಲಿರುವ ದಿನಗಳಲ್ಲಿ ನಮ್ಮ ದೇಶವು ಎಲ್‌ಪಿಜಿ ಸವಾಲುಗಳನ್ನು ಎದುರಿಸಿ ಸಮಾಜ ಕಲ್ಯಾಣ ಸಾಧಿಸಲು ಅಲ್ಲ ಅವಕಾಶಗಳನ್ನು ಹೊಂದಿದೆ. ಆದರೆ ಈ ಸಾಧ್ಯತೆ ಧರ್ಮಪ್ರಧಾನ ದೇಶಗಳಲ್ಲಿ ಇಲ್ಲವೆಂಬುದನ್ನು ನಾವು ಗಮನಿಸಬೇಕಿದೆ. ಭಾರತದಲ್ಲಿಯೂ ಕೂಡಾ ಸಮಾಜ ಕಲ್ಯಾಣವನ್ನು ಸಾಧಿಸಬೇಕೆಂದರೆ ರಾಜ್ಯವು ಶಿಕ್ಷಣ, ಕೌಶಲ್ಯವರ್ಧನೆ, ಆರೋಗ್ಯದಂಥ ಕೆಲವು ಮಹತ್ವದ ಕ್ಷೇತ್ರಗಳಿಗೆ ಹೆಚ್ಚಿನ ಮಹತ್ವ ಕೊಟ್ಟಾಗ ಮಾತ್ರವೇ ಸಮಾಜ ಕಲ್ಯಾಣ ಸಾಧಿಸುವುದು ಸಾಧ್ಯ. ಒಂದು ವೇಳೆ ರಾಜ್ಯವು ಈ ಮಹತ್ವದ ಕ್ಷೇತ್ರಗಳನ್ನು ನಿರ್ಲಕ್ಷಿಸಿದರೇ ದೇಶದ ಜಿಡಿಪಿ ಹೆಚ್ಚುತ್ತದೆ ಆದರೆ ಸಮಾಜ ಕಲ್ಯಾಣದ ಗುರಿ ಕನಸಾಗಿಯೇ ಉಳಿಯುತ್ತದೆ.

**ಪರಾಮರ್ಶನ/ಆಕರ ಗ್ರಂಥಗಳು**


- Christopher Matthews. (2017, June 8). Automation leads to globalization and inequality. *Economy & Business*.

https://www.axios.com/2017/12/15/automation-leads-to-globalization-and-inequality-1513302822

- Hansan, J.E. (2017). What is social welfare history? Social Welfare History Project. Retrieved from https://socialwelfare.library.vcu.edu/recollections/social-welfare-history/
- Marriam Webster Dictionary, Social Welfare, https://www.merriamwebster.com/dictionary/social%20welfare
- Rajendra Prasad.N.L, (2018). An Overview and its Impact on Globalisation and Human Rights, International Journal of Creative Research Thoughts (IJCRT), 6(4).
- Semih Semin & Dilek Guldal. (2008).The Globalisation of Pharmaceutical Industry and The Growing Dependency of Developing Countries : The Case of Turkey. *International Journal of Health Services*, 38(2). 379-398.
- Uri Dadush, William Shaw. (2012, February 2). Globalization, Labor Markets, and Inequality. https://carnegieendowment.org/2012/02/02/globalization-labor-markets-and-inequality-pub-47028